ಸಿ.ಸಿ. ನಂಬರಃ 6516/2022
ಪಿ-ಡಬ್ಲೂಃ 1

<u>ದಿಃ 04.10.2024ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ</u>

1. ನಾನು ಖಾಸಗಿ ಬ್ಯಾಂಕನಲ್ಲಿ ಸೇಲ್ಸ ಮ್ಯಾನೇಜರ್ ನಾಗಿ ಬೆಳಗಾವಿಯಲ್ಲಿ ಕಳೆದ 02 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಚಿಕ್ಕೋಡಿಯ

ಎಚ್ ಡಿ ಎಫ್ ಸಿ ಬ್ಯಾಂಕನಲ್ಲಿ ಸೇಲ್ಸ ಎಕ್ಸಕ್ಯೂಟಿವ್ ಆಗಿ ಒಂದು ವರ್ಷ ಕೆಲಸ ಮಾಡಿರುತ್ತೇನೆ. ನಾನು ಬಿ.ಎ ಪದವೀಧರನಾಗಿರುತ್ತೇನೆ.

2. ಆರೋಪಿ ನನಗೆ 2020 ರಿಂದ ಪರಿಚಯಸ್ಥನಿರುತ್ತಾನೆ. ಆರೋಪಿ ಗುತ್ತಿಗೆದಾರನೆಂದು ಕೆಲಸ ಮಾಡುತ್ತಾನೆ. ಆರೋಪಿ ಮತ್ತು ನನ್ನ ಮದ್ಯೆ 2020 ರಿಂದ ಹಣಕಾಸಿನ ವ್ಯವಹಾರ ಪ್ರಾರಂಭವಾಗಿರುತ್ತದೆ. ಆರೋಪಿ ನನ್ನಿಂದ ರೂ.1,00,000/- ಹಣವನ್ನು ಪಡೆದುಕೊಂಡಿರುತ್ತಾನೆ. ಅದರ ಮರುಪಾವತಿಗಾಗಿ ಈ ಪ್ರಕರಣದ ಚೆಕ್ಕನ್ನು ನೀಡಿರುತ್ತಾನೆ. ಆರೋಪಿಯ ಖಾತೆಗೆ ಸೇರಿದ ಎಷ್ಟು ಚೆಕ್ಕುಗಕಳು ನಿಮ್ಮ ಬಳಿ ಇರುತ್ತವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಈ ಪ್ರಕರಣದ ಚೆಕ್ಕು ಮಾತ್ರ ನನ್ನ ಬಳಿ ಇರುತ್ತದೆ, ಬೇರೆ ಯಾವುದೇ ಚೆಕ್ಕುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

3. ಆರೋಪಿ ನನ್ನಿಂದ ಕೇವಲ ರೂ.1,00,000/- ಹಣ ಪಡೆದುಕೊಂಡಿದ್ದ ಎಂದರೆ ಸರಿ. ಸದರಿ ರೂ.1,00,000/- ಹಣವನ್ನು ಹೊರತುಪಡಿಸಿ ಆರೋಪಿ ನನಗೆ ಯಾವುದೇ ಹಣ ನೀಡುವುದು ಇಲ್ಲ ಎಂದರೆ ಸಾಕ್ಷಿಯು ಆರೋಪಿ ನನ್ನಿಂದ ಈ ಮೊದಲು ಪಡೆದುಕೊಂಡ ಹಣವನ್ನು ಸಂಪೂರ್ಣ ಮುಟ್ಟಿಸಿರುತ್ತಾನೆ. ಈ ಪ್ರಕರಣದ ರೂ.1,00,000/- ಮಾತ್ರ ಕೊಡುವುದು ಉಳಿಸಿಕೊಂಡಿರುತ್ತಾನೆ ಎಂದು

ನುಡಿಯುತ್ತಾರೆ. ಈ ಪ್ರಕರಣ ಸಲ್ಲಿಸಿ ಆದ ನಂತರ ಆರೋಪಿ ನನಗೆ ಕೇವಲ ರೂ.1,00,000/- ಮಾತ್ರ ಉಳಿಸಿಕೊಂಡಿದ್ದ ಎಂದರೆ ಸರಿ. ನಾನು ಆರೋಪಿಗೆ ರೂ.1,00,000/-ಹಣವನ್ನು ನಗದಾಗಿ ನೀಡಿರುತ್ತೇನೆ. ಹಾಗೇ ದಿ.06.07.2021 ರಂದು ಆರೋಪಿಗೆ ರೂ.1,00,000/- ಹಣವನ್ನು ನೀಡಿರುತ್ತೇನೆ.

4. ದಿ.09.07.2021 ರಂದು ನಾನು ಆರೋಪಿಗೆ ಚೆಕ್ಕಿನ ಮುಖಾಂತರ ರೂ.1,00,000/- ಹಣವನ್ನು ನೀಡಿದ್ದೆ ಎಂದರೆ ಸರಿ.

i. ದಿ.26.03.2022 ರಂದು ಆರೋಪಿ ನನ್ನ ಖಾತೆಗೆ ರೂ.6,200/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
ii. ದಿ.31.03.2022 ರಂದು ಆರೋಪಿ ನನ್ನ ಖಾತೆಗೆ ರೂ.20,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
iii. ದಿ.31.03.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
iv. ದಿ.31.03.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
v. ದಿ.04.04.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
vi. ದಿ.18.05.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
vii. ದಿ.18.05.2022 ರಂದು ಆರೋಪಿ ನನ್ನ ಖಾತೆಗೆ ರೂ.8,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.
viii. ದಿ.21.05.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.

ix. ದಿ.22.05.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.

x. ದಿ.17.06.2022 ರಂದು ಆರೋಪಿ ನನ್ನ ಖಾತೆಗೆ ರೂ.10,000/- ಹಣವನ್ನು ಜಮೆ ಮಾಡಿರುತ್ತಾನೆ ಎಂದರೆ ಸರಿ.

ಸಾಕ್ಷಿಯು ಸ್ವತಃ ಮುಂದುವರೆದು ಸದರಿ ಮೇಲಿನ ಹಣಗಳನ್ನು ಆರೋಪಿ ನನ್ನೊಂದಿಗೆ ಮಾಡಿದ ಬೇರೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಣವನ್ನು ನನ್ನ ಖಾತೆಗೆ ಜಮೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಅಂತಹ ಬೇರೆ ವ್ಯವಹಾರ ಆರೋಪಿ ನನ್ನೊಂದಿಗೆ ಮಾಡಿರುತ್ತಾನೆ ಎಂದು ತೋರಿಸಲು ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ನನ್ನಿಂದ ರೂ.50,000/- ಹಣವನ್ನು ಚೆಕ್ಕ ಮುಖಾಂತರ ಪಡೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ.

5. ಆರೋಪಿಗೆ ನಾನು ದಿ.09.07.2021 ರಂದು ನೀಡಿದ ರೂ.1,00,000/- ಹಣದ ಮರುಪಾವತಿಗಾಗಿ ಮೇಲೆ ತಿಳಿಸಿದ ದಿನಾಂಕಗಳಂದು ಆರೋಪಿ ನನ್ನ ಖಾತೆಗೆ ಹಣ ಜಮೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನನ್ನೊಂದಿಗೆ ಬೇರೆ ಹಣದ ವ್ಯವಹಾರದ ಕುರಿತು ಮೇಲೆ ತಿಳಿಸಿದ ದಿನಾಂಕಗಳಂದು ನನ್ನ ಖಾತೆಗೆ ಹಣವನ್ನು ಮರು ಸಂದಾಯ ಮಾಡಿರುತ್ತಾನೆ ಎನ್ನುವ ಕುರಿತು ದೂರಿನಲ್ಲಾಗಲೀ, ನೋಟೀಸಿನಲ್ಲಾಗಲಿ, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ.

6. ಆರೋಪಿಗೆ ನಾನು ಈ ಪ್ರಕರಣದ ಹಣವನ್ನು ಹೊರತುಪಡಿಸಿ ಬೇರೆ ಹಣ ನೀಡಿದ್ದೆ ಎನ್ನುವ ಕುರಿತು ವಿವರಣೆಯನ್ನು ದೂರಿನಲ್ಲಾಗಲೀ, ನೋಟೀಸಿನಲ್ಲಾಗಲಿ, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ. ಆರೋಪಿ ನನ್ನಿಂದ ದಿ.09.07.20221 ರಂದು ಪಡೆದ ರೂ.1,00,000/- ಹಣವನ್ನು ನನ್ನ ಖಾತೆಗೆ ಮೇಲೆ ತಿಳಿಸಿದ ದಿನಾಂಕಗಳಂದು ವರ್ಗಾವಣೆ ಮಾಡಿರುತ್ತಾನೆ ಎಂದರೆ ಸರಿಯಲ್ಲ.

7. ನಾನು ನನ್ನ ದೂರಿನಲ್ಲಿ ಜುಲೈ 2021 ರಂದು ನಾನು ಆರೋಪಿಗೆ ರೂ.1,00,000/- ಹಣವನ್ನು ನೀಡಿದ್ದೆ ಎಂದು ಮಾತ್ರ ಬರೆಸಿರುತ್ತೇನೆ ಎಂದರೆ ಸರಿ. ನಿಖರವಾಗಿ ದಿನಾಂಕವನ್ನು ದೂರಿನಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ ಈ ಹಿಂದೆಯೂ ಸಹ ನನ್ನ ಎ ಟಿ ಎಮ್ ನಿಂದ ಹಣವನ್ನು ವಿತ್ ಡ್ರಾ ಮಾಡಿಕೊಂಡು ನೀಡಿರುತ್ತೇನೆ. ಹಾಗೆ ಹಣ ನೀಡಿರುವ ಕುರಿತು ನನ್ನ ಬ್ಯಾಂಕ ಪಾಸಪುಸ್ತಕ ಈ ಪ್ರಕರದಣಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಬೇಕಾದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

8. ದಿ.09.07.2021 ರಂದು ಆರೋಪಿಗೆ ನಾನು ರೂ.1,00,000/- ಹಣವನ್ನು ಚೆಕ್ ಮುಖಾಂತರ ನೀಡುವ ಸಮಯದಲ್ಲಿ ಆರೋಪಿಯ ಕಡೆಯಿಂದ ಭದ್ರತೆಗಾಗಿ ಆರೋಪಿಯ ಖಾತೆಯ ನಾಲ್ಕು ಖಾಲಿ ಚೆಕ್ಕುಗಳ ಮೇಲೆ ಸಹಿ ಪಡೆದುಕೊಂಡು ನೀಡಿದ್ದೆ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕನ್ನು ಹೊರತುಪಡಿಸಿ ಆರೋಪಿಯ ಖಾತೆಗೆ ಸೇರಿದ ಇನ್ನೂ ಮೂರು ಖಾಲಿ ಚೆಕ್ಕುಗಳು ನನ್ನ ಬಳಿ ಇರುತ್ತವೆ ಎಂದರೆ ಸರಿಯಲ್ಲ. ಸದರಿ ನಾಲ್ಕು ಚೆಕ್ಕುಗಳಲ್ಲಿ ಆರೋಪಿಯ ಖಾತೆಗೆ ಸೇರಿದ ಬ್ಯಾಂಕ್ ಆಫ್ ಬರೋಡಾ ಚಿಕ್ಕೋಡಿ ಖಾತೆಗೆ ಸೇರಿದ ಎರಡು ಚೆಕ್ಕುಗಳು ಹಾಗೂ ಕರ್ನಾಟಕ ಬ್ಯಾಂಕ ಶಾಖೆ, ಬೆಂಗಳೂರು ಇಲ್ಲಿಗೆ ಸೇರಿದ ಇನ್ನೊಂದು ಚೆಕ್ಕು ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಭದ್ರತೆಗಾಗಿ ಆರೋಪಿಯ ಕಡೆಯಿಂದ ದಿ.09.07.2021 ರಂದು ಪಡೆದುಕೊಂಡಿರುವ ಚೆಕ್ಕುಗಳಲ್ಲಿನ ಈ ಪ್ರಕರಣದ ಚೆಕ್ಕು ಸಹ ಒಂದಾಗಿರುತ್ತದೆ ಎಂದರೆ ಸರಿಯಲ್ಲ.

9. ಈ ದೂರು ಸಲ್ಲಿಸುವ ಪೂರ್ವದಲ್ಲಿ ನಾನು ನನ್ನ ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟೀಸು ಆರೋಪಿಗೆ ಜಾರಿಯಾದ ನಂತರ ಆರೋಪಿ ಸ್ವತಃ ನನಗೆ ಭೇಟ್ಟಿಯಾಗಿ ದಿ.09.07.2021 ರಂದು ಪಡೆದ ರೂ.1,00,000/- ಹಣವನ್ನು ನನ್ನ ಖಾತೆಗೆ ಜಮೆ ಮಾಡಿರುವುದಾಗಿ ತಿಳಿಸಿದ್ದ ಎಂದರೆ ಸರಿಯಲ್ಲ. ನಾನು ಭದ್ರತೆಗಾಗಿ

ಆರೋಪಿಯ ಕಡೆಯಿಂದ ಪಡೆದುಕೊಂಡ ನಾಲ್ಕು ಖಾಲಿ ಚೆಕ್ಕುಗಳನ್ನು ಮರಳಿ ಕೊಡಲು ಆರೋಪಿ ಕೇಳಿಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿ ನನಗೆ ನೀಡಬೇಕಾದ ಹಣವನ್ನು ಮರಳಿ ನೀಡಿದರೂ ಸಹ ನಾನು ಆರೋಪಿಯ ಕಡೆಯಿಂದ ಪಡೆದುಕೊಂಡ ಚೆಕ್ಕುಗಳನ್ನು ಮರಳಿ ಕೊಡಲು ಇನಕಾರ ಮಾಡಿದಾಗ ಆರೋಪಿ ತನ್ನ ಖಾತೆ ಇರುವ ಬ್ಯಾಂಕಿಗೆ ಚೆಕ್ಕುಗಳನ್ನು ನಗದೀಕರಣ ಮಾಡಕೂಡದು ಎಂದು ಅರ್ಜಿ ನೀಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಉಳಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.